**ಸೋಮವಾರಪೇಟೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೋಮವಾರಪೇಟೆ**

**ಸಿ.ಸಿ. ನಂ.124/2026**

| **ಪಿರ್ಯಾದಿದಾರರು** | | **ಆರೋಪಿ** |
|---|---|---|
| | **-ವಿರುದ್ಧ-** | |
| ಸೋಮವಾರಪೇಟೆ ಪೊಲೀಸರು | | ಜಯಾನಂದ ತಂದೆಃ ಪಾಪಣ್ಣ, 61 ವರ್ಷ, ಜಂಬೂರು ಗ್ರಾಮ, ಸೋಮವಾರಪೇಟೆ ತಾಲ್ಲೂಕು, |

# ದೋಷಾರೋಪಣೆ

ಶ್ರೀ. ಶ್ರೀನಾಥ್ ಜೆ.ಎನ್., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಆದ ನಾನು, ನಿಮ್ಮ ಮೇಲೆ ಹೊರಿಸುವ ದೋಷಾ ರೋಪಣೆ ಏನೆಂದರೆ,

ದಿನಾಂಕ 09.02.2026 ರಂದು ಸಂಜೆ 7.53 ರ ಸಮಯದಲ್ಲಿ ಸೋಮ ವಾರಪೇಟೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಜಂಬೂರು ಗ್ರಾಮದ ಚಾಸಾ-1 ರವರ ಮನೆಗೆ ತೆರಳುವ ದಾರಿ ಜಂಕ್ಷನ್-2 ರಲ್ಲಿ ಇರುವಾಗ ಆರೋಪಿಯಾದ ನೀನು ನಮ್ಮ ಕುಟುಂಬದವರು ಕಾಫಿ ಒಣಗಿಸುವ ಜಾಗದಲ್ಲಿ ಮನೆ ಮಾಡಿ ಅದನ್ನು ಬಾಡಿಗೆ ನೀಡಿ ನನನಗೆ ಕಿರಿ ಕಿರಿ ಉಂಟು ಮಾಡಿದ್ದೀಯಾ ಎಂದು ಚಾಸಾ-1 ರವರಿಗೆ ಚಾಸಾ-2 ರಿಂದ 3 ರವರ ಸಮಕ್ಷಮ ಅವಾಚ್ಯಶಬ್ದಗಳಿಂದ ಬೈದು ಕೈಯಿಂದ ಎಡಕಣ್ಣಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಆರೋಪಿಯು ಭಾ.ನ್ಯಾ.ಸಂ.ಕಲಂ.115(2)ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕ ದಂದು ಆರೋಪಿಯಾದ ನೀನು ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-1 ರವರಿಗೆ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ರವರ ಬಲಮಂಡಿ ಹಾಗೂ ಬಲಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯು ಭಾ.ನ್ಯಾ.ಸಂ.ಕಲಂ.118(2)ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕ ದಂದು ಆರೋಪಿಯಾದ ನೀನು ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-1 ರವರಿಗೆ ನಿನ್ನ ತಲೆ ಕಡಿದು ಠಾಣೆಗೆ ಕೊಡುತ್ತೇನೆಂದು ಹೇಳಿ ಕೊಲೆ ಬೆದರಿಕೆಯನ್ನು

ಹಾಕಿದ್ದು, ಆ ಮೂಲಕ ಆರೋಪಿಯು ಭಾ.ನ್ಯಾ. ಸಂ.ಕಲಂ.351(1)ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲೆ ಹೇಳಿದ ಕಾರಣಗಳಿಗಾಗಿ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು.

ದಿಃ 14.07.2026

ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.,
ಸೋಮವಾರಪೇಟೆ